# ಸಾಧನಾ ಫಾರೆಸ್ಟ್

# ಕಾಡಿನ ನಡುವೆ ಜೀವನಪಾಠ




ಯಾಂತ್ರಿಕ ಜೀವನದಿಂದ ಬಸವಳಿದವರಿಗೆ ಚೈತನ್ಯವನ್ನು ನವೀಕರಿಸುವ ತಾಣ 'ಸಾಧನಾ ಫಾರೆಸ್ಟ್'. ಪ್ರಕೃತಿಯ ಮಡಿಲಲ್ಲಿ ಐಷಾರಾಮದ ಸವಲತ್ತುಗಳನ್ನು ತೊರೆದು ಅತ್ಯಂತ ಸಹಜವಾಗಿ ಹಾಗೂ ಸರಳವಾಗಿ ಜೀವಿಸುವ ಪಾಠ ಇಲ್ಲಿ ಲಭ್ಯ. ಪ್ರಸಕ್ತ ಸಂದರ್ಭದಲ್ಲಿ ಅಪರೂಪವಾಗುತ್ತಿರುವ ಸಹಬಾಳ್ವೆ, ಸೌಹಾರ್ದ ಹಾಗೂ ಬಹುತ್ವದ ಮಾದರಿಗಳೂ ಇಲ್ಲಿ ಜೀವಂತ.

■ ಧಾರಿಣಿ ಮಾಯಾ

ಪುದುಚೆರಿಗೆ ಹೋಗಿದ್ದಾಗ, ಎಲ್ಲಾ ಪ್ರವಾಸಿ ಸ್ಥಳಗಳನ್ನು ನೋಡಿದ ಮೇಲೆ ಕಿವಿಗೆ ಬಿದ್ದ ಹೆಸರು 'ಸಾಧನಾ ಫಾರೆಸ್ಟ್'. ಆರೋವಿಲ್ಲೇ ಎಂಬ ಜಾಗದಲ್ಲಿ ಇರುವ ಇದರ ಸ್ವರೂಪದ ಬಗ್ಗೆ ಸ್ಪಷ್ಟ ಪರಿಕಲ್ಪನೆ ದೊರೆಯಲಿಲ್ಲವಾದರೂ, ಅದನ್ನು ನೋಡಬೇಕೆಂದು ಕುತೂಹಲವಂತೂ ಬೆಳೆಯಿತು. ಏನದು ಸಾಧನಾ ಫಾರೆಸ್ಟ್, ನೋಡಿಯೇ ಬಿಡೋಣ ಎಂದು ಅಲ್ಲಿಗೆ ಪಯಣ ಬೆಳೆಸಿದೆ.

ಆ ಜಾಗಕ್ಕೆ ತಲುಪುತ್ತಲೇ, ಮೊದಲು ಕಂಡದ್ದು ದೊಡ್ಡ ಗುಡಿಸಿಲಿನಂಥ ಒಂದು ಬಿಡಾರ. ಅದು ಮರದ ಬೊಂಬುಗಳಿಂದ ಹಾಗೂ ಒಣಗರಿಗಳಿಂದ ರೂಪುಗೊಂಡಿತ್ತು. ಒಳಗಿನದು ಏನೂ ಕಾಣಿಸದಿರಲೆಂದು ಆ ಗುಡಿಸಿಲಿನ ಸುತ್ತಲೂ ಬಣ್ಣಬಣ್ಣದ ಬಟ್ಟೆಗಳನ್ನು ಕಟ್ಟಿದ್ದರು. ಅದು ಏನೆಂದು ಯಾರನ್ನಾದರು ಕೇಳೋಣವೆಂದರೆ, ಅಲ್ಲಿ ಯಾರೂ ತಕ್ಷಣಕ್ಕೆ ಗೋಚರಿಸಲಿಲ್ಲ. ಕುತೂಹಲದಿಂದ ನಾನು, ಆ ಬಟ್ಟೆಗಳನ್ನು ಸರಿಸಿ ಒಳಗೆ ಇಣುಕಿದೆ. ಅಲ್ಲಿ ನೆಲದ ಮೇಲೆ ಚಾಪೆ, ಪುಸ್ತಕ ಹಾಗೂ ಬಟ್ಟೆಗಳು ಹರಡಿದ್ದವು. ಯಾರೋ ಅಲ್ಲಿ ವಾಸವಿದ್ದಂತಿತ್ತು. ಆದರೆ ಆ ಸಮಯದಲ್ಲಿ ಯಾರೂ ಕಣ್ಣಿಗೆ ಬೀಳಲಿಲ್ಲ. ನನ್ನ ಕುತೂಹಲ ಮತ್ತಷ್ಟೂ ಹೆಚ್ಚಾಗುತ್ತಲೇ ಹೋಯಿತು. ಪಕ್ಕದಲ್ಲೇ ಸೋಲಾರ್ ಪ್ಯಾನಲ್‌ಗಳು ಇದ್ದವು. ಮುಂದಡಿಯಿಡುತ್ತಲೇ, ಇಂತಹುದೇ ಇನ್ನೂ ಅನೇಕ ಬೃಹತ್ ಗುಡಿಸಿಲಿನಂಥ ಬಿಡಾರಗಳು ಅಲ್ಲಲ್ಲಿ ಕಂಡುಬಂದವು. ಮತ್ತೂ ಒಳಹೊಕ್ಕಾಗ, ಅಲ್ಲಿ ಒಂದಷ್ಟು ಜನ ಕಣ್ಣಿಗೆಬಿದ್ದರು. ಭಾರತೀಯರು, ವಿದೇಶೀಯರು ಒಂದೇ ಬಿಡಾರದಲ್ಲಿ ಪಕ್ಕಪಕ್ಕದಲ್ಲೇ ಚಾಪೆ ಹಾಸಿಕೊಂಡು ಕುಳಿತು ಹರಟುತ್ತಿದ್ದರು. ಮತ್ತೊಂದು ಗುಡಿಸಿಲಿನ ಬಿಡಾರದಲ್ಲಿ ಕೆಲವರು ತರಕಾರಿ ಹೆಚ್ಚುತ್ತಿದ್ದರು.

ನಾನಿದ್ದಲ್ಲಿಗೆ ಒಬ್ಬ ವಿದೇಶಿ ಬಂದು 'ಹಾಯ್' ಎನ್ನುತ್ತಲೇ ತಮ್ಮ ಪರಿಚಯ ಮಾಡಿಕೊಂಡರು. ಅವರು ಸುಮಾರು 15 ವರ್ಷಗಳಿಂದ ಅಲ್ಲಿ ವಾಸ್ತವ್ಯ ಹೂಡಿದ್ದು, ಅಲ್ಲಿನ ಜಾಗ, ಅಲ್ಲಿಗೆ ಬರುವ ಅತಿಥಿಗಳನ್ನು ನೋಡಿಕೊಳ್ಳುವವರಾಗಿದ್ದರು. ನಾವಿದ್ದಲ್ಲಿಗೆ ಬಂದ ಮತ್ತೊರ್ವ ವ್ಯಕ್ತಿ, ತಮ್ಮನ್ನು ಶೇಖರ್ ಎಂದು ಪರಿಚಯಿಸಿಕೊಂಡರು. ಆ ಪ್ರದೇಶದ ನಿರ್ವಹಣೆಯನ್ನು ಅವರು ನೋಡಿಕೊಳ್ಳುತ್ತಿದ್ದರು. ನನ್ನಂತೆ ಅಲ್ಲಿಗೆ ಬಂದ ಇನ್ನೂ ಕೆಲವು ಮಂದಿಗೆ ಅಲ್ಲಿನ ರೀತಿ ರಿವಾಜನ್ನು ಹೇಳುತ್ತಾ ಹೋದರು.

ಯೋರಿತ್ ಮತ್ತು ಅವಿರಾಮ್ ರೋಜಿನ್ ಎನ್ನುವವರು 2003ರಲ್ಲಿ 'ಸಾಧನಾ ಫಾರೆಸ್ಟ್' ರೂಪಿಸಿದರು. ತಮಿಳುನಾಡಿಗೆ ಸೇರಿದ ಆರೋವಿಲ್ಲೆಯ ಹೊರವಲಯದಲ್ಲಿರುವ, ಸುಮಾರು 70 ಎಕರೆಯಷ್ಟು ಜಾಗವನ್ನು ಈ ಪ್ರದೇಶ ಆವರಿಸಿಕೊಂಡಿದೆ. ಮೊದಲು ನಮಗೆ ಹಾಯ್ ಹೇಳಿದ ವ್ಯಕ್ತಿಯೇ ಅವಿರಾಮ್ ರೋಜಿನ್ ಎಂದು ನಂತರ ತಿಳಿಯಿತು. ಇವರ ಮುಖ್ಯ ಉದ್ದೇಶ ಅರಣ್ಯ ಸಂರಕ್ಷಣೆ, ಹಸಿರಿನ ಪುನರ್ ಸ್ಥಾಪನೆ ಹಾಗೂ ಜಲ ಸಂರಕ್ಷಣೆ. ಒಂದು ಮರ ಕಡಿದರೆ ಅದರ ಸ್ಥಾನ ತುಂಬಲು ಇವರು 6 ಸಸಿಗಳನ್ನು ನೆಡುತ್ತಾರೆ. ಸರ್ಕಾರದಿಂದ ಯಾವುದೇ ರೀತಿಯ ನೆರವು ಪಡೆಯದೆ ಇಲ್ಲಿನ ವಿದ್ಯುತ್ ಹಾಗೂ ನೀರನ್ನು ಇವರೇ ಸ್ವತಃ ಪೂರೈಸಿಕೊಳ್ಳುತ್ತಾರೆ.

ಪರಿಸರದಿಂದ ಪಡೆದ ವಸ್ತುಗಳನ್ನು ಪರಿಸರಕ್ಕೇ ನೀಡುವುದು 'ಸಾಧನಾ ಫಾರೆಸ್ಟ್'ನಲ್ಲಿನ ಜೀವನದ ಉದ್ದೇಶವಾಗಿದೆ. ಇದೊಂದು ಸಮರ್ಥನೀಯ ಜೀವಿತ ಸಮುದಾಯಕ್ಕೆ (sustainable living community) ಒತ್ತು ಕೊಡುವಂಥ ಜೀವನಶೈಲಿ. ಇಲ್ಲಿ ಜೈವಿಕ ವಿಘಟನೆಯ ವಸ್ತುಗಳನ್ನೇ (biodegradable) ಪ್ರತಿಯೊಂದಕ್ಕೂ ಬಳಸಲಾಗುತ್ತದೆ.

'ಸಾಧನಾ ಫಾರೆಸ್ಟ್'ನಲ್ಲಿ ಖಾಸಗಿ ಹಾಗೂ ಸಾರ್ವಜನಿಕ ಬಿಡಾರಗಳು ಇವೆ. ದಿನಕ್ಕೆ 500 ರೂಪಾಯಿ ಪಾವತಿಸಿ, ಯಾರಾದರೂ ಇಲ್ಲಿ ತಂಗಬಹುದು. ಇಲ್ಲಿ ಉಪಯೋಗಿಸುವ ಎಲ್ಲಾ ವಸ್ತುಗಳನ್ನು ಅಲ್ಲಿನವರೇ ತಯಾರಿಸುತ್ತಾರೆ. ಅಡುಗೆ ಮಾಡಲು ಸೌದೆ ಒಲೆಯನ್ನೇ ಉಪಯೋಗಿಸುತ್ತಾರೆ. ಹಲ್ಲುಜ್ಜಲು ಇದ್ದಿಲು ಪುಡಿ. ಅವರವರು ಉಂಡ ತಟ್ಟೆಯನ್ನು ಬೂದಿ ಹಾಗೂ ತೆಂಗಿನ ನಾರಿನಿಂದ ತೊಳೆದು ಬಿಸಿಲಿನಲ್ಲಿ ಒಣಗಲು ಜೋಡಿಸಿಡಬೇಕು. ನೀರನ್ನೂ ಮಿತವಾಗಿಯೇ ಬಳಸಬೇಕು. ಎಂಥ ಹವಾಮಾನದಲ್ಲೂ ತಣ್ಣೀರು ಸ್ನಾನ. ಪ್ರತಿದಿನ ಒಂದೊಂದು ಗುಂಪು ಒಂದೊಂದು ಕೆಲಸ ವಹಿಸಿಕೊಂಡಿರುತ್ತದೆ.



ಮನೆಗಳಲ್ಲಿ ನಾವು 'ಲಿವಿಂಗ್